ದಿನಾಂಕ 07.02.2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- 6ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಟಿ.ಸಿ ರವರಿಂದಃ-**

ನಾನು, ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಗಳು ಒಂದೇ ಕುಟುಂಬಕ್ಕೆ ಸೇರಿದವರು. ನಾನು ನಮ್ಮ ಕುಟುಂಬದ ವಂಶವೃಕ್ಷವನ್ನು ನೋಡಿರುವುದಿಲ್ಲ. ಮಾಚಯ್ಯನಿಗೆ ನಾಲ್ಕು ಜನ ಮಕ್ಕಳಿದ್ದು, ಅವರುಗಳ ಹೆಸರು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಪ್ಯಾರಾ 3 ರಲ್ಲಿ ಪೊಕ್ಕಳಿಚಂಡ ಮಾಚಯ್ಯನಿಗೆ ಕುಟ್ಟಪ್ಪ, ಕಾರ್ಯಪ್ಪ ಮತ್ತು ಮೊಣ್ಣಯ್ಯ ಎಂಬ ಮೂರು ಗಂಡು ಮಕ್ಕಳು ಎಂದು ತಿಳಿಸಿರುವ ವಿಚಾರ ಸತ್ಯವಾಗಿದೆ. ಮಾಚಯ್ಯನ ಕೊನೆಯ ಮಗನ ಹೆಸರು ಮೊಣ್ಣಯ್ಯ ಅಲ್ಲ, ಆದರೆ ದೇವಯ್ಯ ಎಂದರೆ ಸರಿ.

ದಾವಾ ಸ್ವತ್ತಿನ ಸರ್ವೆ ನಂ. 33/1 ಒಟ್ಟು 9.90 ಎಕರೆ ವಿಸ್ತೀರ್ಣವಿದೆ. ದಾವಾಸ್ವತ್ತು ಮಾಚಯ್ಯನ ವಾರಸುದಾರರಿಗಲ್ಲದೇ ನಮ್ಮ ಕುಟುಂಬದ ಕುಟ್ಟಪ್ಪ ಮತ್ತು ಕಾಳಪ್ಪರವರ ವಾರಸುದಾರರಿಗೆ ಸೇರಿರುವ ಆಸ್ತಿ ಎಂದರೆ ಸರಿ. ಕುಟ್ಟಪ್ಪ ಮತ್ತು ಕಾಳಪ್ಪರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ

ಮಾಡಿರುವುದಿಲ್ಲ. ನಮ್ಮ ಪೊಕ್ಕಳಿಚಂಡ ಕುಟುಂಬಕ್ಕೆ ದಾವಾಸ್ವತ್ತು ಅಲ್ಲದೇ ಇತರೆ ಆಸ್ತಿಗಳು ಇವೆ ಎಂದರೆ ಸರಿ. ದಾವಾಸ್ವತ್ತು ಮಾಚಯ್ಯನ ಪಾಲಿಗೆ ಬಂದ ಬಗ್ಗೆ ಯಾವುದೇ ದಾಖಲೆಯನ್ನು ನಾನು ನೋಡಿರುವುದಿಲ್ಲ. ಮಾಚಯ್ಯರವರು ಸ್ವಾಧೀನದಲ್ಲಿ ಇದ್ದ ಆಸ್ತಿಯಲ್ಲಿ ಅವರ ಮೂರು ಜನ ಗಂಡು ಮಕ್ಕಳಿಗೆ ಸಮನಾದ ಹಕ್ಕು ಇದೆ ಎಂದರೆ ಸರಿ. ಮಾಚಯ್ಯನ ಮೂರುಜನ ಗಂಡು ಮಕ್ಕಳ ನಡುವೆ ವಿಭಾಗ ಆಗಿರುವ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಮಾಚಯ್ಯನಿಗೆ ಕುಟುಂಬದ ಆಸ್ತಿಗಳಲ್ಲಿ ಎಷ್ಟು ಎಕರೆ ಬಾಣೆ ಜಾಗ ಹಾಗೂ ಎಷ್ಟು ಎಕರೆ ಗದ್ದೆ ಜಾಗ ಸೇರಬೇಕು ಎಂಬುದು ನನಗೆ ಗೊತ್ತಿಲ್ಲ. ದಾವಾಸ್ವತ್ತಿನಲ್ಲಿ ನನಗೂ ಸಹಾ ಹಕ್ಕು ಇದೆ. ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದೇನೆ. ನಾನು ಈ ದಾವೆಯಲ್ಲಿ ಪಕ್ಷಗಾರನಲ್ಲ.

5ನೇ ಪ್ರತಿವಾದಿ ನನಗೆ ಪರಿಚಯವಿರುತ್ತಾರೆ. ಅವರ ಪತ್ನಿಯ ಹೆಸರು ಚೋಂದಮ್ಮ. ಅವರು ಮಾಚಯ್ಯನ ಮಗನಾದ ದೇವಯ್ಯನ ಮಗಳು ಎಂದರೆ ಸರಿ. ಆಕೆ ಮೃತರಾಗಿರುತ್ತಾರೆ. ದೇವಯ್ಯನಿಗೆ ಚೋಂದಮ್ಮನನ್ನು ಹೊರತು ಪಡಿಸಿ ಬೇರೆ ಮಕ್ಕಳು ಇರುವುದಿಲ್ಲ. ದಿನಾಂಕ **08.08.1995** ರಂದು ಚೋಂದಮ್ಮರವರು ನಾಣಯ್ಯನಿಗೆ ದಾವಾಸ್ವತ್ತಿನ ಪೈಕಿ **1** ಎಕರೆ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಾಣಯ್ಯ ಮತ್ತು ಅವರ ತಂದೆ

ದಿನಾಂಕ **20.07.1998** ರಂದು ಸದರಿ ಸ್ವತ್ತನ್ನು ನಮ್ಮ ಕುಟುಂಬದ ಕಾಳಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಕಾಳಪ್ಪ ರವರು ತಾವು ಖರೀದಿಸಿದ **1** ಎಕರೆ ಸ್ವತ್ತನ್ನು ದಿನಾಂಕ **15.07.2002** ರಂದು **6**ನೇ ಪ್ರತಿವಾದಿಯ ತಂದೆಯಾದ ಕುಟ್ಟಪ್ಪರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತು ಈಗ **6**ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿ. ಸದರಿ ಸ್ವತ್ತಿಗೆ ಹೊಂದಿಕೊಂಡಂತೆ ವಾದಿಗೆ ಸೇರಿದ ಜಮೀನು ಇದೆ.

ದಾವಾಸ್ವತ್ತಿನ ಮೇಲೆ ಕಾರ್ಯಪ್ಪ ಮತ್ತು ಮೊಣ್ಣಯ್ಯ ರವರಿಗೆ ಹಕ್ಕು ಇಲ್ಲದಿರುವ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ವಾದಿಯು ತಯಾರಿಸಿಕೊಂಡು ಬಂದಿರುತ್ತಾರೆ. ನಾನು, ವಾದಿ ಹಾಗೂ **1** ರಿಂದ **4** ನೇ ಪ್ರತಿವಾದಿಗಳು ಒಂದೇ ಕುಟುಂಬಸ್ತರಾಗಿರುವುದರಿಂದ **6**ನೇ ಪ್ರತಿವಾದಿಗೆ ವಂಚಿಸುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.